# ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು
## ಪ್ರಥಮ ಸರ್ವಸದಸ್ಯರ ಸಭೆಯ ನಡಾವಳಿ.

ದಿನಾಂಕ 25/10/2019 ರಂದು ಬೆಂಗಳೂರಿನ ಕನ್ನಡಭವನದ ಅಂತರಂಗದಲ್ಲಿ ನಡೆದ ಕರ್ನಾಟಕ ನಾಟಕ ಅಕಾಡೆಮಿಯ ಪ್ರಥಮ ಸರ್ವ ಸದಸ್ಯರ ಸಭೆಯ ನಡಾವಳಿ.

**ಉಪಸ್ಥಿತರು: ಸರ್ವಶ್ರೀ / ಶ್ರೀಮತಿ**

| | | |
|---|---|---|
| 1. | ಪ್ರೊ: ಭೀಮಸೇನ.ಆರ್. | ಅಧ್ಯಕ್ಷರು |
| 2. | ಎಮ್.ಕೆ.ಮಠ | ಸದಸ್ಯರು |
| 3. | ಪ್ರೇಮಾ ಬಾದಾಮಿ | ಸದಸ್ಯರು |
| 4. | ಪ್ರಭುದೇವ ಕಪ್ಪಗಲ್ಲು | ಸದಸ್ಯರು |
| 5. | ವಿನೋದ ಅಂಬೇಕರ್ | ಸದಸ್ಯರು |
| 6. | ಶಿವಪ್ಪ ಭರಮಪ್ಪ ಅದರಗುಂಚಿ | ಸದಸ್ಯರು |
| 7. | ಜೆ.ಜೋಸೆಫ್ | ಸದಸ್ಯರು |
| 8. | ಎಂ.ಎಸ್.ಗುಣಶೀಲನ್ | ಸದಸ್ಯರು |
| 9. | ಕೆ.ಆರ್.ಪ್ರಕಾಶ್ | ಸದಸ್ಯರು |
| 10. | ಟಿ.ಸದಾಶಿವಯ್ಯ | ಸದಸ್ಯರು |
| 11. | ಹೆಚ್.ಎಂ.ನಾಗರಾಜರಾವ್ | ಸದಸ್ಯರು |
| 12. | ಯಶವಂತ ಸರದೇಶ ಪಾಂಡೆ | ಸದಸ್ಯರು |
| 13. | ವೈಜನಾಥ್ ಬಿರಾದಾರ | ಸದಸ್ಯರು |
| 14. | ಟಿ.ರಾಜಾರಾವ್ | ಸದಸ್ಯರು |
| 15. | ಬಲವಂತರಾವ್ ಪಾಟೀಲ್ | ಜಂಟಿ ನಿರ್ದೇಶಕರು |
| 16. | ಸಿದ್ಧರಾಜು | ಅರ್ಥ ಸದಸ್ಯರು |
| 17. | ಡಾ.ಶೈಲಜಾ ಎ.ಸಿ | ರಿಜಿಸ್ಟ್ರಾರ್.ಕ.ನಾ.ಅ |

----

ಅಕಾಡೆಮಿಯ ಸರ್ವಸದಸ್ಯರ ಸಭೆಯನ್ನು ಸದಸ್ಯರಾದ ಶ್ರೀ ಟಿ.ರಾಜಾರಾವ್ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು.

ಹಾಜರಿದ್ದ, ಎಲ್ಲಾ ಸರ್ವರನ್ನು ಅಕಾಡೆಮಿ ರಿಜಿಸ್ಟ್ರಾರ್. ಡಾ.ಶೈಲಜಾ ಎ.ಸಿ. ಅವರು ಸ್ವಾಗತಿಸಿ, ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಪ್ರೊ:ಭೀಮಸೇನ್.ಆರ್ ಅವರು ವಹಿಸಿಕೊಂಡು ಮುಂದಿನ ಕಾರ್ಯಗಳನ್ನು ನಿರ್ವಹಿಸಬೇಕೆಂದು ಕೋರಿದರು.

**ಜಂಟಿನಿರ್ದೇಶಕರ ನುಡಿ**

ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಬಲವಂತರಾವ್ ಪಾಟೀಲ್ ಅವರು ಪ್ರಥಮ ಸರ್ವಸದಸ್ಯರ ಸಭೆಗೆ ಶುಭ ಹಾರೈಸಿ, ಮಾತನಾಡುತ್ತಾ, ಅಕಾಡೆಮಿಯ ಆಡಳಿತಾತ್ಮಕ ವಿಚಾರಕ್ಕೆ ಸಂಬಂಧಿಸಿದಂತೆ, ಅಕಾಡೆಮಿಯ ಅಂಗರಚನೆ, ಆರ್ಥಿಕ ಸಂಹಿತೆ, ಸಾದಿಲ್ವಾರು ನಿಯಮ, ಕೆಟಿಪಿಪಿ ಆಕ್ಟ್‌ಗಳ ಪ್ರಕಾರ, ಕಾರ್ಯನಿರ್ವಹಿಸಲು ಮತ್ತು ಈ ಸಂಬಂಧ ರಿಜಿಸ್ಟ್ರಾರ್ ಅವರೊಂದಿಗೆ ಸಹಕರಿಸಲು ಕೋರಿದರು. ಎಲ್ಲಾ ಕಾರ್ಯಚಟುವಟಿಕೆಗಳಿಗೆ ಸಂಪೂರ್ಣವಾದ ಬೆಂಬಲ ಸಹಕಾರ ನೀಡುವುದಾಗಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪರವಾಗಿ ಭರವಸೆ ನೀಡಿದರು.

ಅಧ್ಯಕ್ಷರು ಮತ್ತು ಸದಸ್ಯರ ಪರಿಚಯ

ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರು ಅಧ್ಯಕ್ಷರ ಸೂಚನೆಯಂತೆ. ತಮ್ಮ ಪರಿಚಯ ಮಾಡಿಕೊಳ್ಳುವ ಮುಖಾಂತರ ಸಭೆ ಪ್ರಾರಂಭವಾಯಿತು.

ಕ್ರಿಯಾಯೋಜನೆಯಲ್ಲಿ ಇದುವರೆಗೂ ಆಗಿದ್ದ ಖರ್ಚುವೆಚ್ಚಗಳನ್ನು ಸಭೆ ಅನುಮೋದಿಸಿತು. ಮತ್ತು ನೂತನ ಅಕಾಡೆಮಿಯು ರಚಿತವಾಗುವ ಮುನ್ನ ನಿಕಟಪೂರ್ವ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಸಿದ ಎಲ್ಲಾ ಕಾರ್ಯಕ್ರಮಗಳ ವೆಚ್ಚವನ್ನು ಭರಿಸಲು ಮತ್ತು ಮುಂದೆ ನಡೆಸುವ ಎಲ್ಲಾ ಕಾರ್ಯಕ್ರಮಗಳಿಗೆ ಹೆಚ್ಚುವರಿಯಾಗಿ ಬರುವ ವೆಚ್ಚವನ್ನು ಕ್ರಿಯಾಯೋಜನೆಯ ಬೇರೆ ಶೀರ್ಷಿಕೆಯಡಿ ಉಳಿಕೆಯಾಗುವ ಹಣದಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲು ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆಯಲಾಯಿತು.

ಕ್ರಿಯಾಯೋಜನೆ

ದಿನಾಂಕ 01/06/2019ರಂದು ನಡೆದ ಸ್ಥಾಯಿಸಮಿತಿ ಸಭೆಯಲ್ಲಿ ಕೆಳಕಂಡ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ. ದಿನಾಂಕ 29-7-2019ರಂದು ಸರ್ವಸದಸ್ಯರ ಸಭೆಯಲ್ಲಿ ಅನುಮೋದಿಸಲಾಯಿತು.

## <u>ಕ್ರಿಯಾಯೋಜನೆ ವಿವರ</u>

2018-19 ನೇ ಸಾಲಿನ ಉಳಿಕೆ

1. ಜನರಲ್ ಮತ್ತು ಇತರೆ ಮೂಲಗಳಿಂದ ಬಂದ ಆದಾಯದಿಂದ ಉಳಿಕೆ — ರೂ.72.41.516/-
2. 2019-20 ನೇ ಸಾಲಿನ ಅನುದಾನ — ರೂ.80.00.000/-

---

ರೂ.1.52.41.516/-

| ಜನರಲ್ ಮತ್ತು ಇತರೆ ಮೂಲಗಳಿಂದ ಬಂದ ಆದಾಯದಿಂದ ಉಳಿಕೆಯಡಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರಗಳು | | |
|---|---|---|
| ಕ್ರ.ಸಂ | ವಿವರ | ಮೊತ್ತ ರೂ |
| 1 | 2019ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭ | 19.75.000/- |
| 2 | **ಪ್ರಕಟಣೆಗಳು**<br>ಭರತನ ನಾಟ್ಯಶಾಸ್ತ್ರ ಪುಸ್ತಕ.<br>ಜಿಲ್ಲಾ ರಂಗಮಾಹಿತಿ<br>ಬಳ್ಳಾರಿ - ಶ್ರೀ ಗಂಗಪ್ಪ ಎ.<br>ಬೆಂ.ಗ್ರಾಮಾಂತರ - ಜಗದೀಶ್ ಕೆಂಗನಾಳ್<br>ಚಿಕ್ಕಬಳ್ಳಾಪುರ - ಕೋಡಿ ರಂಗಪ್ಪ<br>**ರಂಗ ಸಂಪನ್ನರು**<br>ರಂಗಭೂಮಿ ಮತ್ತು ಮಹಿಳೆ ಪುಸ್ತಕ ಮರುಮುದ್ರಣ | 7.50.000/- |
| 3 | ವೃತ್ತಿರಂಗಭೂಮಿ ಕಂಪನಿಯಲ್ಲಿ 15 ಜನ ಯುವಕಲಾವಿದರಿಗೆ<br>ತರಬೇತಿ/ಶಿಷ್ಯವೇತನ ತಿಂಗಳಿಗೆ 10.000/- *15ಜನ*6 ತಿಂಗಳಿಗೆ | 9.00.000/- |
| 4 | 2 ಕಡೆ ವೃತ್ತಿ ಕಂಪನಿ ನಾಟಕೋತ್ಸವ | 12.00.000/- |
| 5 | ಸಭೆಯ ವೆಚ್ಚಗಳು. ಅಧ್ಯಕ್ಷರು. ಸದಸ್ಯರು. ರಿಜಿಸ್ಟ್ರಾರ್. ಸಿಬ್ಬಂದಿ ಪ್ರವೆಚ್ಚ | 6.00.000/- |
| 6 | ಅಧ್ಯಕ್ಷರ ವಿವೇಚನೆ | 50.000/- |
| 7 | ಅಧ್ಯಕ್ಷರ ಗೌರವ ಸಂಭಾವನೆ . ಅಧ್ಯಕ್ಷರು. ರಿಜಿಸ್ಟ್ರಾರ್ ಸ್ಥಳೀಯ ಕಾರಿನ ಬಾಡಿಗೆ | 9.60.000/- |
| 8 | ಎಸ್/ಟಿ. ಫೆಲೋಶಿಪ್ ಮಾರ್ಗದರ್ಶಕರಿಗೆ ಸಂಭಾವನೆ | 01.10.000/- |
| 9 | ಸಿಬ್ಬಂದಿ ವೇತನ | 13.55.000/- |
| 10 | ರಂಗಮಂದಿರ ಪ್ರಾಧಿಕಾರ ಹೊಂಗೆ ಸಿದ್ಧತೆ. ಕಲಾಮಂದಿರ ಶಾಕುಂತಲೋತ್ಸವ | 1.00.000/- |
| | ಒಟ್ಟು ಮೊತ್ತ ರೂ. | 80.00.000/- |

## ಕಳೆದ ವರ್ಷದ ಉಳಿಕೆ ಬಾಬತ್ತಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರಗಳು

| | | |
|---|---|---|
| 11 | 2018-19ನೇ ಸಾಲಿನ ಬಾಕಿ ಪಾವತಿ(ವಿಶ್ವರಂಗಭೂಮಿ ದಿನಾಚರಣೆ<br>1. ಬೆಂಗಳೂರು - 1,39,413/-<br>2. 29 ಜಿಲ್ಲೆ 29*20,000/- -5,80,000/-<br>3. ಪ್ರಶಸ್ತಿ ಸಮಾರಂಭದ ಬಾಕಿ - 92,018/-<br>------ -------------<br>8,11,431/- | 8,30,000/- |
| 12 | ಹೊರರಾಜ್ಯ ನಾಟಕೋತ್ಸವ ( ದೆಹಲಿ, ಪುಣೆ) | 5,00,000/- |
| 13 | ದಾಖಲೀಕರಣ, ಸಿಬ್ಬಂದಿ ವೇತನ, ವೆಬ್‌ಸೈಟ್ ನಿರ್ವಹಣೆ | 14,80,000/- |
| 14 | ಪೌರಾಣಿಕ ನಾಟಕೋತ್ಸವ /ಹವ್ಯಾಸಿ ನಾಟಕೋತ್ಸವ | 8,00,000/- |
| 15 | ಜನರಲ್ ಫೆಲೋಶಿಪ್ | 10,50,000/- |
| 16 | ನಗದು ಡ್ರಾ, ಅಂಚೆ ಚೀಟಿ, ಅನಿರೀಕ್ಷಿತ ವೆಚ್ಚಗಳು. | 4,46,516/- |
| 17 | ವಿಶ್ವರಂಗಭೂಮಿ ದಿನಾಚರಣೆ | 2,50,000/- |
| 18 | ಸಾದಿಲ್ವಾರು ವೆಚ್ಚಗಳು /ಲೇಖನ ಸಾಮಗ್ರಿಗಳು | 3,35,000/- |
| 19 | ಶಿಬಿರಗಳು, ಕಮ್ಮಟಗಳು | 4,00,000/- |
| 20 | ರಂಗಮಂದಿರಗಳಿಗೆ ಲೈಟ್ಸ್ | 11,50,000/- |
| | ಒಟ್ಟು ಮೊತ್ತ ರೂ. | 72,41,516/- |

## ಕರ್ನಾಟಕ ನಾಟಕ ಅಕಾಡೆಮಿಯ 2018-19ನೇ ಸಾಲಿನ ಉಳಿಕೆ

1. ಜನರಲ್ ಅನುದಾನ ರೂ.62,33,832/-
2. ಇತರೆ ಮೂಲಗಳ ಬಾಬ್ತು ರೂ.10,07,684/-

---

ರೂ.72,41,516/-

3. ವಿಶೇಷಘಟಕ 2017-18ನೇ ಸಾಲಿನ ಉಳಿಕೆ ರೂ. 75,500/-
4. ವಿಶೇಷಘಟಕ ಫೆಲೋಶಿಪ್ ಉಳಿಕೆ ರೂ.10,50,000/-
5. ವಿಶೇಷಘಟಕ 2018-19ನೇ ಸಾಲಿನ ಉಳಿಕೆ ರೂ. 5,00,000/-
6. ಗಿರಿಜನ ಉಪಯೋಜನೆ 2017-18ನೇ ಸಾಲಿನ ಉಳಿಕೆ ರೂ. 44,188/-
7. ಗಿರಿಜನ ಉಪಯೋಜನೆ ಫೆಲೋಶಿಪ್ ಉಳಿಕೆ ರೂ. 24,75,000/-
8. ಗಿರಿಜನ ಉಪಯೋಜನೆ 2018-19ನೇ ಸಾಲಿನ ಉಳಿಕೆ ರೂ. 2,50,000/-
9. ಜನರಲ್ ಫೆಲೋಶಿಪ್ ರೂ. 35,000/-
10. ಶತಮಾನೋತ್ಸವ ಉಳಿಕೆ ರೂ. 65,906/-
11. ಮಹಿಳೆ ಮತ್ತು ಮಕ್ಕಳ ವರ್ತಮಾನ ನೋಟ ರೂ. 7,93,453/-

---

ಒಟ್ಟು ರೂ.1,25,30,563/-

**ಕ್ರಿಯಾಯೋಜನೆ ವಿವರ**

ಕಳೆದ ಕಮಿಟಿಯವರು ರೂಪಿಸಿದ್ದ ಕ್ರಿಯಾಯೋಜನೆಯ ವಿವಿಧ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ, ಕೆಲವೊಂದು ಮಾರ್ಪಾಡು ಮಾಡಿ, ದಿನಾಂಕ 25-10-2019ರಲ್ಲಿದ್ದ ಉಳಿಕೆ ಮೊತ್ತಕ್ಕೆ ಕೆಳಕಂಡ ಕ್ರಿಯಾಯೋಜನೆಯನ್ನು ಅಕಾಡೆಮಿ ಸರ್ವಸಮ್ಮತದೊಂದಿಗೆ ಅನುಮೋದಿಸಿತು.

ಲೈಟ್ ನೀಡುವ ಯೋಜನೆಯನ್ನು ಸಮಿತಿ ರದ್ದುಪಡಿಸಿ, ಅದಕ್ಕಾಗಿ ಮೀಸಲಿಟ್ಟಿದ್ದ ರೂ.11,50,000/- ಗಳನ್ನು ಪ್ರಶಸ್ತಿ, ದಾಖಲೀಕರಣ ಯೋಜನೆ, ಪೌರಾಣಿಕ, ಹವ್ಯಾಸಿ ನಾಟಕೋತ್ಸವ ಮೊದಲಾದ ಯೋಜನೆಗಳಿಗೆ ಬಳಸಿಕೊಳ್ಳಲು ತೀರ್ಮಾನಿಸಿತು. ಕಾರ್ಯಕ್ರಮಗಳ ರೂಪುರೇಷೆಗಳನ್ನು ಸ್ಥಾಯಿಸಮಿತಿ ಸಭೆಯಲ್ಲಿ ರೂಪಿಸಲು ಸಭೆ ತೀರ್ಮಾನಿಸಿತು.

# 2019-20 ನೇ ಸಾಲಿನ ಪರಿಷ್ಕೃತ ಕ್ರಿಯಾಯೋಜನೆ ವಿವರ

1. 2019-20 ನೇ ಸಾಲಿನ ಅನುದಾನ — ರೂ.80,00,000/-
2. ಜನರಲ್ ಮತ್ತು ಇತರೆ ಮೂಲಗಳಿಂದ ಬಂದ ಆದಾಯದಿಂದ ಉಳಿಕೆ (ದಿನಾಂಕ 25-10-2019ರಲ್ಲಿದ್ದ ಉಳಿಕೆ) — ರೂ.41,23,216/-

---

**ಒಟ್ಟು ರೂ.1,21,23,216/-**

| ಕ್ರ.ಸಂ | ವಿವರ | ನಿಗದಿತ ಮೊತ್ತ ರೂ |
|---|---|---|
| 1 | 2019ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭ | 22,00,000/- |
| 2 | **ಪ್ರಕಟಣೆಗಳು**<br>ಭರತನ ನಾಟ್ಯಶಾಸ್ತ್ರ ಪುಸ್ತಕ, ಜಿಲ್ಲಾ ರಂಗಮಾಹಿತಿ ಬಳ್ಳಾರಿ - ಶ್ರೀ ಗಂಗಪ್ಪ ಎ.<br>ಬೆಂ.ಗ್ರಾಮಾಂತರ – ಜಗದೀಶ್ ಕೆಂಗನಾಳ್.ಚಿಕ್ಕಬಳ್ಳಾಪುರ – ಕೋಡಿ ರಾಮಪುರ, ರಂಗ **ಸಂಪನ್ನರು - ಬೇಲೂರು ರಘುನಂದನ್- ಬೇಲೂರು ಕೃಷ್ಣಮೂರ್ತಿ**<br>ರಂಗಭೂಮಿ ಮತ್ತು ಮಹಿಳೆ ಪುಸ್ತಕ ಮರುಮುದ್ರಣ ಹಾಗೂ ಅಕಾಡೆಮಿಯ ಇನ್ನಿತರೆ ಪ್ರಕಟಣೆಗಳ ಮುದ್ರಣ ವೆಚ್ಚ | 5,00,000/- |
| 3 | ವೃತ್ತಿರಂಗಭೂಮಿ ಕಂಪನಿಯಲ್ಲಿ 15 ಜನ ಯುವಕಲಾವಿದರಿಗೆ ತರಬೇತಿ/ಶಿಷ್ಯವೇತನ ತಿಂಗಳಿಗೆ 10,000/- *15ಜನ*6 ತಿಂಗಳಿಗೆ | 9,00,000/- |
| 4 | 2 ಕಡೆ ವೃತ್ತಿ ಕಂಪನಿ ನಾಟಕೋತ್ಸವ (ಚಿಕ್ಕಮಗಳೂರು, ಹುಬ್ಬಳ್ಳಿ) | 12,00,000/- |
| 5 | ಹೊರರಾಜ್ಯ ನಾಟಕೋತ್ಸವ ( ಹೈದ್ರಾಬಾದ್, ಪುಣೆ / ಅಹಮದಾಬಾದ್) | 6,00,000/- |
| 6 | ಪೌರಾಣಿಕ ನಾಟಕೋತ್ಸವ ಹವ್ಯಾಸಿ ನಾಟಕೋತ್ಸವ (6ಲಕ್ಷ +4ಲಕ್ಷ) (ಹಾವೇರಿ ಮತ್ತು ಸಿದ್ಧಾಪುರ ಶಿರಸಿ) | 10,00,000/- |
| 7 | ವಿಶ್ವರಂಗಭೂಮಿ ದಿನಾಚರಣೆ ಬೆಂಗಳೂರು ಕಾರ್ಯಕ್ರಮ | 1,50,000/- |
| 8 | ವಿಶ್ವರಂಗಭೂಮಿ ದಿನಾಚರಣೆ – 29 ಜಿಲ್ಲೆಗಳಲ್ಲಿ | 5,80,000/- |
| 9 | ಸಭೆಯ ವೆಚ್ಚಗಳು, ಅಧ್ಯಕ್ಷರು, ಸದಸ್ಯರು, ರಿಜಿಸ್ಟ್ರಾರ್, ಸಿಬ್ಬಂದಿ ಪ್ರ.ವೆಚ್ಚ | 7,00,000/- |
| 10 | ಅಧ್ಯಕ್ಷರ ವಿವೇಚನೆ | 50,000/- |
| 11 | ಅಧ್ಯಕ್ಷರ ಗೌರವ ಸಂಭಾವನೆ , ಅಧ್ಯಕ್ಷರು, ರಿಜಿಸ್ಟ್ರಾರ್ ಸ್ಥಳೀಯ ಕಾರಿನ ಬಾಡಿಗೆ | 7,25,331/- |
| 12 | ಎಸ್/ಟಿ, ಫೆಲೋಶಿಪ್ ಮಾರ್ಗದರ್ಶಕರಿಗೆ ಸಂಭಾವನೆ | 01,10,000/- |
| 13 | ಸಿಬ್ಬಂದಿ ವೇತನ | 6,55,963/- |
| 16 | ದಾಖಲೀಕರಣ, ಹೊರಗುತ್ತಿಗೆ ಸಿಬ್ಬಂದಿ ವೇತನ, ವೆಬ್‌ಸೈಟ್ | 11,02,527/- |
| 17 | ಜನರಲ್ ಫೆಲೋಶಿಪ್ | 9,30,000/- |
| 18 | ನಗದು ಡ್ರಾ, ಅಂಚೆ ಚೀಟಿ, ಅನಿರೀಕ್ಷಿತ ವೆಚ್ಚಗಳು, ಸಾದಿಲ್ವಾರು ವೆಚ್ಚಗಳು /ಲೇಖನ ಸಾಮಗ್ರಿಗಳು | 6,19,395/- |
| 19 | ರಂಗಾಯಣದ ರಂಗಬಾನುಲಿ ಕಾರ್ಯಕ್ರಮ (12 ತಿಂಗಳು)ಆಗಸ್ಟ್ 2019 ರಿಂದ | 60,000/- |
| 20 | ಸರ್ಕಾರಿ ಪದವಿಪೂರ್ವ ಕಾಲೇಜು, ಶಿವಮೊಗ್ಗ ಹಳಗನ್ನಡ ಕಾವ್ಯ, ನಾಟಕವನ್ನು ರಂಗರೂಪಕ್ಕೆ ಅಳವಡಿಸಿ ಪ್ರದರ್ಶಿಸುವುದು | 40,000/- |
| | ಒಟ್ಟು ರೂ. | 1,21,23,216/- |

## ವಿಶೇಷಘಟಕ ಯೋಜನೆ

| ಕ್ರ.ಸಂ | ವಿವರ | ಉಳಿಕೆ ರೂ. |
|---|---|---|
| 1 | ವಿಶೇಷಘಟಕ 2017-18ನೇ ಸಾಲಿನ ಉಳಿಕೆ<br>ವಿಶೇಷಘಟಕ ಫೆಲೋಶಿಪ್ ಉಳಿಕೆ | 8,30,500/- |
| 2 | ವಿಶೇಷಘಟಕ 2018-19ನೇ ಸಾಲಿನ ಉಳಿಕೆ | 5,00,000/- |
| 3 | 2019-20ನೇ ಸಾಲಿಗೆ ವಿಶೇಷಘಟಕ ಅನುದಾನ | 5,00,000/- |
| | ಒಟ್ಟು ರೂ | 18,30,500/- |

ಗಿರಿಜನ ಉಪಯೋಜನೆ

| ಕ್ರ. ಸಂ | ವಿವರ | ಉಳಿಕೆ ರೂ. |
|---|---|---|
| 1 | ಗಿರಿಜನ ಉಪಯೋಜನೆ 2017-18ನೇ ಸಾಲಿನ ಉಳಿಕೆ | 18,49,188/- |
| | ಗಿರಿಜನ ಉಪಯೋಜನೆ ಫೆಲೋಶಿಪ್ ಉಳಿಕೆ | |
| 2 | ಗಿರಿಜನ ಉಪಯೋಜನೆ 2018-19ನೇ ಸಾಲಿನ ಉಳಿಕೆ | 2,50,000/- |
| 3 | ಜನರಲ್ ಫೆಲೋಶಿಪ್ | 35,000/- |
| 4 | ಶತಮಾನೋತ್ಸವ ಉಳಿಕೆ | 65,906/- |
| 5 | ಮಹಿಳೆ ಮತ್ತು ಮಕ್ಕಳ ವರ್ತಮಾನ ನೋಟ | 7,93,453/- |
| | | 29,93,547/- |

2019-20ನೇ ಸಾಲಿನ ಪ್ರಶಸ್ತಿಯ ವಿಷಯದ ಬಗ್ಗೆ ಮುಂದಿನ ಸರ್ವಸದಸ್ಯರ ಸಭೆಯಲ್ಲಿ ಚರ್ಚೆ ಮಾಡಿ, ತೀರ್ಮಾನವನ್ನು ತೆಗೆದುಕೊಳ್ಳಲು ಸಭೆ ತೀರ್ಮಾನಿಸಿತು.

**ಪ್ರಕಟಣೆಗಳು**

**ಭರತನ ನಾಟ್ಯಶಾಸ್ತ್ರ ಪುಸ್ತಕ:** ನಾಟ್ಯಶಾಸ್ತ್ರ ಪುಸ್ತಕದ ಸಂಬಂಧ ಶ್ರೀ ಜೆ.ಶ್ರೀನಿವಾಸ ಮೂರ್ತಿಯವರಿಗೆ ನಿಗದಿಪಡಿಸಿದ್ದ ಸಂಭಾವನೆ ರೂ.25,000/- ನೀಡಲು ಮತ್ತು ಶ್ರೀಮತಿ ಕೆ.ಎಸ್.ಸತ್ಯವತಿ ಅವರಿಗೆ ನಾಟ್ಯಶಾಸ್ತ್ರದ 12ನೇ ಅಧ್ಯಾಯನವನ್ನು ಪರಿಷ್ಕರಣೆ ಮಾಡಲು ಮತ್ತು ಅವರಿಗೆ ಸಂಭಾವನೆಯಾಗಿ ರೂ.1,000/- ನೀಡಲು ಸಭೆ ತೀರ್ಮಾನಿಸಿತು.

**ಕೊಡಗು ಜಿಲ್ಲಾರಂಗಮಾಹಿತಿ :** ಕೊಡಗು ಜಿಲ್ಲಾ ರಂಗಮಾಹಿತಿಯನ್ನು ಸಿದ್ಧಪಡಿಸಲು ಶ್ರೀ ಅಡ್ಯಂಡ ಕಾರ್ಯಪ್ಪ ಅವರಿಗೆ ವಹಿಸಿದ್ದು, ಡಿಸೆಂಬರ್ ಅಂತ್ಯದೊಳಗೆ ಸಿದ್ಧಪಡಿಸಲು ಕಾಲಾವಕಾಶ ನೀಡಲು ಆ ಸಮಯದೊಳಗೆ ನೀಡಲು ಅವರಿಗೆ ಸಾಧ್ಯವಾಗದಿದ್ದಲ್ಲಿ, ಬೇರೆಯವರಿಗೆ ಆ ಕೆಲಸವನ್ನು ವಹಿಸಲು ರಿಜಿಸ್ಟ್ರಾರ್ ಅವರನ್ನು ಕೋರಲಾಯಿತು.

**ರಂಗಭೂಮಿ ಮತ್ತು ಮಹಿಳೆ ಪುಸ್ತಕ ಮರುಮುದ್ರಣ :** ರಂಗಭೂಮಿ ಮತ್ತು ಮಹಿಳೆ ಪುಸ್ತಕಕ್ಕೆ ಕೆಲವೊಂದು ಲೇಖನಗಳನ್ನು ಸೇರ್ಪಡೆಗೊಳಿಸಿ, ಅದನ್ನು ಮರುಮುದ್ರಣಗೊಳಿಸಲು ಸಭೆ ತೀರ್ಮಾನಿಸಿತು.

**ವೃತ್ತಿರಂಗಭೂಮಿ ಕಂಪನಿಯಲ್ಲಿ 15 ಜನ ಯುವಕಲಾವಿದರಿಗೆ ತರಬೇತಿ/ಶಿಷ್ಯವೇತನ**

ಶಿಷ್ಯವೇತನ ಪಡೆಯಲು ಆಯ್ಕೆಯಾಗಿರುವ 15 ಜನರನ್ನು ಮತ್ತು 5 ವೃತ್ತಿರಂಗಭೂಮಿ ಕಂಪನಿಯವರನ್ನು ಮುಂದಿನ ಸ್ಥಾಯಿಸಮಿತಿ ಸಭೆಯಂದು ಅಕಾಡೆಮಿಗೆ ಕರೆಸಿ, ಈ ಬಗ್ಗೆ ಚರ್ಚಿಸಿ, ಈ ಬಗ್ಗೆ ನಿರ್ಧಾರ ಕೈಗೊಳ್ಳಲು ಸಭೆ ತೀರ್ಮಾನಿಸಿತು.

**ವೃತ್ತಿ ಕಂಪನಿ ನಾಟಕೋತ್ಸವ**

ಸದಸ್ಯರಾದ ಶ್ರೀ ಹೆಚ್.ಎಂ.ನಾಗರಾಜರಾವ್ ಮತ್ತು ಶ್ರೀ ಯಶವಂತ ಸರದೇಶ ಪಾಂಡೆ ಅವರುಗಳ ಸಂಚಾಲಕತ್ವದಲ್ಲಿ ಮೂರುದಿನಗಳ ವೃತ್ತಿಕಂಪನಿ ನಾಟಕೋತ್ಸವವನ್ನು ಚಿಕ್ಕಮಗಳೂರು ಮತ್ತು ಹುಬ್ಬಳ್ಳಿಯಲ್ಲಿ ಏರ್ಪಡಿಸಲು ಸಭೆ ತೀರ್ಮಾನಿಸಿತು.

**ಹೊರರಾಜ್ಯ ನಾಟಕೋತ್ಸವ ( ಹೈದ್ರಾಬಾದ್/ ಪುಣೆ / ಅಹಮದಾಬಾದ್)**

ಹೈದ್ರಾಬಾದ್. ಪುಣೆ / ಅಹಮದಾಬಾದ್ ಎರಡು ಕಡೆ ಹೊರರಾಜ್ಯ ನಾಟಕೋತ್ಸವವನ್ನು ನಡೆಸಲು ಸಭೆ ತೀರ್ಮಾನಿಸಿತು ಪುಣೆ /ಅಹಮದಾಬಾದ್ ನಾಟಕೋತ್ಸವದ ಸಂಚಾಲಕತ್ವವನ್ನು ಶ್ರೀ ಯಶವಂತ ಸರದೇಶಪಾಂಡೆ ವಹಿಸಿಕೊಳ್ಳಲು ಸಭೆ ಅನುಮೋದಿಸಿತು.

**ಪೌರಾಣಿಕ ನಾಟಕೋತ್ಸವ /ಹವ್ಯಾಸಿ ನಾಟಕೋತ್ಸವ (ಹಾವೇರಿ ಮತ್ತು ಸಿದ್ಧಾಪುರ /ಶಿರಸಿ)**

ಸದಸ್ಯರಾದ ಶಿವಪ್ಪ ಭರಮಪ್ಪ ಅದರಗುಂಚಿ ಅವರ ಸಂಚಾಲಕತ್ವದಲ್ಲಿ ಹಾವೇರಿಯಲ್ಲಿ ಪೌರಾಣಿಕ ನಾಟಕೋತ್ಸವನ್ನು ಮತ್ತು ಸಿದ್ಧಾಪುರ /ಶಿರಸಿಯಲ್ಲಿ ಕೆ.ಆರ್.ಪ್ರಕಾಶ್ ಅವರ ಸಂಚಾಲಕತ್ವದಲ್ಲಿ ಹವ್ಯಾಸಿ ನಾಟಕೋತ್ಸವ ನಡೆಸಲು ಸಭೆ ತೀರ್ಮಾನಿಸಿತು.

**ದಾಖಲೀಕರಣದ ಯೋಜನೆ**

ದಾಖಲೀಕರಣದ ಯೋಜನೆಯನ್ನು ಮುಂದುವರಿಸಲು ಸಭೆ ಅನುಮೋದನೆ ನೀಡಿತು ಮತ್ತು ದಾಖಲೀಕರಣ ಯೋಜನೆಯಲ್ಲಿ ಇಬ್ಬರು ತಾಂತ್ರಿಕ ಸಹಾಯಕರು ಮತ್ತು ಒಬ್ಬರು ಸಹಾಯಕ ದಲಾಯಿತ್ ಆಗಿ ಕೆಲಸ ನಿರ್ವಹಿಸುತ್ತಿರುವ ಮೂರು ಜನ ಹೊರಗುತ್ತಿಗೆ ನೌಕರರಿಗೆ ಮತ್ತು ಕಚೇರಿ ಕೆಲಸದಲ್ಲಿ ಶೀಘ್ರಲಿಪಿಗಾರ್ತಿಯಾಗಿ ಕೆಲಸ ನಿರ್ವಹಿಸುತ್ತಿರುವ ಒಬ್ಬರು ಹೊರಗುತ್ತಿಗೆ ನೌಕರರು. ಒಟ್ಟು ನಾಲ್ಕು ಜನರಿಗೆ. ಅವರಿಗೆ ನಿಗದಿಪಡಿಸಿರುವ ನಿವ್ವಳ ವೇತನಕ್ಕೆ ನಿಯಮಾನುಸಾರ ಪಿ.ಎಫ್ ಮತ್ತು ಇಎಸ್.ಐ ಮೊತ್ತವನ್ನು ಅಕಾಡೆಮಿಯಿಂದ ಸೇರಿಸಿ. ನೀಡಲು ಮತ್ತು ಪ್ರಸ್ತುತ ಈ ಸೇವೆಯನ್ನು ನೀಡುತ್ತಿರುವ ಕಿಯೋನಿಕ್ಸ್ ಸೇವೆಯನ್ನು ಮುಂದುವರಿಸಲು ಸಭೆ ತೀರ್ಮಾನಿಸಿತು. ಇದುವರೆವಿಗೂ ಸ್ಕ್ಯಾನ್ ಮಾಡಿರುವ. ಎಲ್ಲಾ ರಂಗದಾಖಲೆಗಳನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲು ಸಭೆ ತೀರ್ಮಾನಿಸಿತು.

**ವಿಶ್ವರಂಗಭೂಮಿ ದಿನಾಚರಣೆ**

2020 ಮಾರ್ಚ್ 27ರಂದು ವಿಶ್ವರಂಗಭೂಮಿ ದಿನಾಚರಣೆಯನ್ನು ಬೆಂಗಳೂರಿನಲ್ಲಿ ಮತ್ತು ರಾಜ್ಯದ ಇತರ 29 ಜಿಲ್ಲೆಗಳಲ್ಲಿ ಏಕಕಾಲದಲ್ಲಿ ನಡೆಸಲು ಮತ್ತು 29 ಜಿಲ್ಲೆಯ ರಂಗಸಂಸ್ಥೆಗಳಿಗೆ ತಲಾ ರೂ.20,000/- ದಂತೆ ಕಾರ್ಯಕ್ರಮದ ವೆಚ್ಚ ನೀಡಲು ಸಭೆ ತೀರ್ಮಾನಿಸಿತು.

ರಂಗಾಯಣದ ರಂಗಬಾನುಲಿ ಕಾರ್ಯಕ್ರಮವನ್ನು ಮುಂದುವರಿಸಲು(ರೂ.60,000/-) ಮತ್ತು ಸರ್ಕಾರಿ ಪದವಿಪೂರ್ವ ಕಾಲೇಜು. ಶಿವಮೊಗ್ಗ ಹಳಗನ್ನಡ ಕಾವ್ಯ. ನಾಟಕವನ್ನು ರಂಗರೂಪಕ್ಕೆ ಅಳವಡಿಸಿ ಪ್ರದರ್ಶಿಸುವ ಕಾರ್ಯಕ್ರಮಕ್ಕೆ (ರೂ.40,000/-)ನಿಗದಿಪಡಿಸಿರುವ ಅನುದಾನವನ್ನು ನೀಡಲು ಸಭೆ

**ಇಡೀ ವರ್ಷದ ಕಾರ್ಯಚಟುವಟಿಕೆಗಳನ್ನು ಹಾಗೂ ದೈನಂದಿಕ ಆಗುಹೋಗುಗಳನ್ನು ತೀರ್ಮಾನಿಸಲು 2019-20ನೇ ಆರ್ಥಿಕ ವರ್ಷಕ್ಕೆ ಅನುಗುಣವಾಗಿ (2019 ಅಕ್ಟೋಬರ್ - 2020 ಮಾರ್ಚ್) ಅಕಾಡೆಮಿಯ ನೀತಿಯಂತೆ ಸ್ಥಾಯಿಸಮಿತಿಯೊಂದನ್ನು ರಚಿಸಲಾಯಿತು. ಆ ಸಮಿತಿಗೆ ಕೆಳಕಂಡ ಸದಸ್ಯರುಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.**

1. ಶ್ರೀ ಎಂ.ಎಸ್.ಗುಣಶೀಲನ್, ಬೆಂಗಳೂರು
2. ಶ್ರೀ ಕೆ.ಆರ್.ಪ್ರಕಾಶ್, ಉತ್ತರ ಕನ್ನಡ
3. ಶ್ರೀ ಹೆಚ್.ಎಂ.ನಾಗರಾಜರಾವ್, ಚಿಕ್ಕಮಗಳೂರು
4. ಶ್ರೀ ಯಶವಂತ ಸರದೇಶ ಪಾಂಡೆ, ಹುಬ್ಬಳ್ಳಿ

ಸ್ಥಾಯಿಸಮಿತಿಯು ಅಕಾಡೆಮಿಯ ಕ್ರಿಯಾಯೋಜನೆಯಂತೆ. ಕಾರ್ಯಕ್ರಮಗಳನ್ನು ರೂಪಿಸಿ. ನಿರ್ವಹಿಸಲು ಹಾಗೂ ಅದಕ್ಕೆ ಅವಶ್ಯಕವಾದ ನಿರ್ಣಯಗಳನ್ನು ಕೈಗೊಳ್ಳಲು ಅನುಮತಿಸಲಾಯಿತು.

**ವಿಶೇಷಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ:**

2018-19 ಮತ್ತು 2019-20ನೇ ಸಾಲಿಗೆ ವಿಶೇಷಘಟ್ಟಕ ಯೋಜನೆಯಲ್ಲಿ ಒಟ್ಟು ರೂ.10,00,000/- ಮತ್ತು 2018-19ನೇ ಸಾಲಿಗೆ ಗಿರಿಜನ ಉಪಯೋಜನೆಯಡಿ ರೂ.2,50,000/-ಗಳ ಅನುದಾನ ಇಲಾಖೆಯಿಂದ ಬಂದಿದ್ದು, ಈ ಸಂಬಂಧ ಪತ್ರಿಕೆಯಲ್ಲಿ ಪ್ರಕಟಣೆ ನೀಡಿ, ಅರ್ಜಿಗಳನ್ನು ಆಹ್ವಾನಿಸಿ, ಬಂದ ಅರ್ಜಿಗಳಲ್ಲಿ ವಿಶೇಷಘಟಕ ಯೋಜನೆಯ ಒಂದು ಶಿಬಿರಕ್ಕೆ 20 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, 8 ದಿನಗಳ ಒಂದು ಶಿಬಿರವನ್ನು ಕಾಸರಗೋಡಿನಲ್ಲಿ ಸದಸ್ಯರಾದ ಶ್ರೀ ಎಂ.ಕೆ.ಮಠ ಅವರ ಸಂಚಾಲಕತ್ವದಲ್ಲಿ ನಡೆಸಲು ಸಭೆ ತೀರ್ಮಾನಿಸಿತು ಮತ್ತು ಗಿರಿಜನ ಉಪಯೋಜನೆಗೆ 10 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, 8 ದಿನದ ಶಿಬಿರವನ್ನು ಬಳ್ಳಾರಿಯಲ್ಲಿ, ಸದಸ್ಯರಾದ ಶ್ರೀಟಿ.ರಾಜಾರಾವ್ ಅವರ ಸಂಚಾಲಕತ್ವದಲ್ಲಿ ಏರ್ಪಡಿಸಲು ಸಭೆ ತೀರ್ಮಾನಿಸಿತು. ರೂಪುರೇಷೆಗಳನ್ನು ಸಂಚಾಲಕರು ಒದಗಿಸಿದ ನಂತರ ಸ್ಥಾಯಿಸಮಿತಿಯಲ್ಲಿ ಚರ್ಚಿಸಿ, ಈ ಬಗ್ಗೆ ಅಂತಿಮಗೊಳಿಸಲು ಸಭೆ ಸಮ್ಮತಿಸಿತು. ವಿಶೇಷಘಟಕ ಯೋಜನೆಯ ಮತ್ತೊಂದು ಶಿಬಿರದ ಸ್ಥಳವನ್ನು ಮುಂದಿನ ಸ್ಥಾಯಿಸಮಿತಿ ಸಭೆಯಲ್ಲಿ ತೀರ್ಮಾನಿಸಲು ನಿರ್ಧರಿಸಲಾಯಿತು. ಈ ಸಂಬಂಧ ವಿಶೇಷಘಟಕ ಮತ್ತು ಗಿರಿಜನ ಉಪಯೋಜನೆಗೆ ಉಪಸಮಿತಿ ಸದಸ್ಯರ ಆಯ್ಕೆಯನ್ನು ಮುಂದಿನ ಸ್ಥಾಯಿಸಮಿತಿ ಸಭೆಯಲ್ಲಿ ನಿರ್ಣಯಿಸಲು ತೀರ್ಮಾನಿಸಲಾಯಿತು.

**ವೃತ್ತಿರಂಗಭೂಮಿ ಕಾಯಕಲ್ಪ ಯೋಜನೆ**

ವೃತ್ತಿರಂಗಭೂಮಿ ಕಾಯಕಲ್ಪ ಯೋಜನೆಯಡಿ 26 ನಾಟಕ ಕಂಪನಿಗಳಿಗೆ ಇಬ್ಬರು ತಜ್ಞರ ಜೊತೆ ಭೇಟಿ ನೀಡಿ, ವರದಿ ನೀಡಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಪತ್ರಮುಖೇನ ತಿಳಿಸಿದ್ದ ಹಿನ್ನಲೆಯಲ್ಲಿ, ಮಾನ್ಯ ಕಾರ್ಯದರ್ಶಿಯವರು ಅಕಾಡೆಮಿಯ ಸಭೆಯಲ್ಲಿಟ್ಟು ಚರ್ಚಿಸಲು ತಿಳಿಸಿರುವ ವಿಷಯವನ್ನು ಸಭೆಯ ಮುಂದಿಡಲಾಯಿತು. ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ ಸಭೆಯು ಶ್ರೀ ವೈಜನಾಥ ಬಿರಾದಾರ್ ಮತ್ತು ಶ್ರೀಮತಿ ಪ್ರೇಮಾ ಬಾದಾಮಿ ಅವರನ್ನೊಳಗೊಂಡಂತೆ ಸಮಿತಿ ರಚಿಸಿ, ಸಮೀಕ್ಷೆ ಕಾರ್ಯ ಕೈಗೊಳ್ಳಲು ರಿಜಿಸ್ಟ್ರಾರ್ ಅವರಿಗೆ ತಿಳಿಸಲಾಯಿತು. ಪ್ರೇಮಾ ಬಾದಾಮಿ ಅವರು ಅನಾರೋಗ್ಯದ ಕಾರಣವನ್ನು ಮುಂದಿಟ್ಟದ್ದರಿಂದ ಅವರ ಬದಲಿಗೆ ಶ್ರೀ ವಿನೋದ ಅಂಬೇಕರ್ ಅವರನ್ನು ಸಮಿತಿಗೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ಸಮೀಕ್ಷೆ ಸಂಬಂಧ ಆಗುವ ಖರ್ಚುವೆಚ್ಚಗಳ ಅನುಬಂಧವನ್ನು ನಿರ್ದೇಶಕರಿಗೆ ನೀಡಲು ಸಭೆ ತೀರ್ಮಾನಿಸಿತು.

**ಮಾಸಾಶನ**

2019-20ನೇ ಆರ್ಥಿಕ ವರ್ಷದಲ್ಲಿ ರಂಗಭೂಮಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ಒಟ್ಟು 50 ಅರ್ಜಿಗಳು ಅಕಾಡೆಮಿಯಲ್ಲಿ ಸ್ವೀಕೃತವಾಗಿದ್ದು, 30 ಜಿಲ್ಲೆಯ ಸಹಾಯಕ ನಿರ್ದೇಶಕರಿಂದ ಅರ್ಜಿಗಳು ಬಂದ ನಂತರ ಈ ಸಂಬಂಧ ಸಂದರ್ಶನವನ್ನು ಡಿಸೆಂಬರ್ ಮಾಹೆಯಲ್ಲಿ ನಡೆಸಲು ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು**

**ಸದಸ್ಯರ ಜಿಲ್ಲಾ ಕಾರ್ಯಕ್ಷೇತ್ರ :**ಸದಸ್ಯರುಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸಲು ಈ ಕೆಳಕಂಡಂತೆ ಅವರಿಗೆ ಜಿಲ್ಲೆಗಳನ್ನು ವಹಿಸಲಾಯಿತು.

1. ಶ್ರೀ ಎಂ.ಕೆ.ಮಠ - ಮಂಗಳೂರು, ಉಡುಪಿ, ಮಡಿಕೇರಿ
2. ಶ್ರೀಮತಿ ಪ್ರೇಮಾ ಬಾದಾಮಿ - ಬೆಂಗಳೂರು ಗ್ರಾಮಾಂತರ, ಕೋಲಾರ
3. ಶ್ರೀ ಪ್ರಭುದೇವ ಕಪ್ಪಗಲ್ಲು - ರಾಯಚೂರು, ಯಾದಗಿರಿ
4. ಶ್ರೀ ವಿನೋದ ಅಂಬೇಕರ್ - ಬೆಳಗಾಂ, ಬಾಗಲಕೋಟೆ
5. ಶ್ರೀ ಶಿವಪ್ಪ ಭರಮಪ್ಪ ಅದರಗುಂಚಿ - ಧಾರವಾಡ, ಹಾವೇರಿ
6. ಶ್ರೀ ಜೋಸೆಫ್ - ರಾಮನಗರ, ಮಂಡ್ಯ
7. ಶ್ರೀ ಎಂ.ಎಸ್.ಗುಣಶೀಲನ್ - ಬೆಂಗಳೂರು ನಗರ ಮತ್ತು ಚಿಕ್ಕಬಳ್ಳಾಪುರ

8. ಶ್ರೀ ಕೆ.ಆರ್.ಪ್ರಕಾಶ್ - ಉತ್ತರ ಕನ್ನಡ
9. ಶ್ರೀ ಬಿ.ಎಸ್.ಸದಾಶಿವಯ್ಯ - ತುಮಕೂರು, ಚಿತ್ರದುರ್ಗ
10. ಶ್ರೀ ನಾಗರಾಜರಾವ್ ಕಲ್ಕಟ್ಟೆ - ಚಿಕ್ಕಮಗಳೂರು, ಶಿವಮೊಗ್ಗ, ಹಾಸನ
11. ಶ್ರೀ ಯಶವಂತ ಸರದೇಶ ಪಾಂಡೆ - ವಿಜಯಪುರ, ಗದಗ, ದಾವಣಗೆರೆ
12. ಶ್ರೀ ವೈಜನಾಥ್ ಬಿರಾದಾರ್ - ಬೀದರ್, ಗುಲಬರ್ಗಾ
13. ಶ್ರೀ ಬಿ.ರಾಜಾರಾವ್ - ಬಳ್ಳಾರಿ, ಕೊಪ್ಪಳ

ಹೆಚ್ಚುವರಿಯಾಗಿ ನೀಡಿರುವ ಜಿಲ್ಲೆಗಳನ್ನು ಇನ್ನೂ ಇಬ್ಬರು ಸದಸ್ಯರು ಮತ್ತು ಮೂರು ಜನ ಸಹಸದಸ್ಯರು ಆಯ್ಕೆಯಾದ ನಂತರ ಅವರುಗಳಿಗೆ ನೀಡಲು ಸಭೆ ಅನುಮೋದಿಸಿತು.

* ಸದಸ್ಯರಿಗೆ ಗುರುತಿನ ಚೀಟಿ

ಲೆಟರ್‌ಹೆಡ್‌ಗಳಲ್ಲಿ ಸರ್ಕಾರದ ಮತ್ತು ಅಕಾಡೆಮಿಯ ಲೋಗೋಗಳನ್ನು ಬಳಸಬಾರದೆಂದು ಸರ್ಕಾರದ ಆದೇಶವಿರುವುದನ್ನು ರಿಜಿಸ್ಟ್ರಾರ್ ಅವರು ಸಭೆಯ ಗಮನಕ್ಕೆ ತಂದರು. ಸಭೆ ಅದನ್ನು ಅನುಮೋದಿಸಿತು. ಅಕಾಡೆಮಿಯ ಲೋಗೋವನ್ನೊಳಗೊಂಡಿರುವ ಗುರುತಿನ ಚೀಟಿಯನ್ನು ಸದಸ್ಯರಿಗೆ ನೀಡುವಂತೆ ರಿಜಿಸ್ಟ್ರಾರ್ ಅವರನ್ನು ಕೋರಲಾಯಿತು. ಸದಸ್ಯರು ಮತ್ತು ಅಧ್ಯಕ್ಷರಿಗೆ ನಿಯಮಾನುಸಾರ ಪ್ರಯಾಣಭತ್ಯೆ ಮತ್ತು ಸಭಾಭತ್ಯೆಯನ್ನು ನೀಡುವ ವಿಚಾರವನ್ನು ರಿಜಿಸ್ಟ್ರಾರ್ ಅವರು ಸಭೆಯ ಗಮನಕ್ಕೆ ತಂದರು. ಇದನ್ನು ಸಮ್ಮತಿಸಿದ ಸದಸ್ಯರು ವಿಶೇಷ ಸಂದರ್ಭಗಳಲ್ಲಿ ಹೆಚ್ಚುವರಿ ಪ್ರಯಾಣಭತ್ಯೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಿದರು.

ಸಭಾ ನಡಾವಳಿ ನೀಡುವ ಕುರಿತು

ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಜೆ.ಲೋಕೇಶ್ ಅವರು ದಿನಾಂಕ 29-7-2019ರ ಸರ್ವಸದಸ್ಯರ ನಡಾವಳಿಯನ್ನು ನೀಡುವಂತೆ ಮೌಖಿಕವಾಗಿ ರಿಜಿಸ್ಟ್ರಾರ್ ಅವರನ್ನು ಕೋರಿದ್ದು, ಈ ವಿಷಯದ ಬಗ್ಗೆ ಚರ್ಚೆಯಾಗಿ, ಸಭೆಯಲ್ಲಿ ಉಪಸ್ಥಿತರಿದ್ದ ಜಂಟಿ ನಿರ್ದೇಶಕರು ಮಾಹಿತಿ ಹಕ್ಕು ನಿಯಮದಡಿ ಅರ್ಜಿ ಸಲ್ಲಿಸಿದಲ್ಲಿ ನಡಾವಳಿಯನ್ನು ನೀಡಬಹುದೆಂದು ಸೂಚಿಸಿದರು.

ಅಕಾಡೆಮಿ ಪ್ರಕಟಣೆಗಳು

ನೂತನವಾಗಿ ನಾಟಕ ಅಕಾಡೆಮಿಗೆ ಆಯ್ಕೆಯಾಗಿರುವ ಅಧ್ಯಕ್ಷರು ಮತ್ತು ಸದಸ್ಯರಿಗೆ ಅಕಾಡೆಮಿ ಪ್ರಕಟಣೆಗಳನ್ನು ಗೌರವಪೂರ್ವಕವಾಗಿ ನೀಡಲು ಮತ್ತು ಅಕಾಡೆಮಿ ಮುಂದಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅತಿಥಿಗಳಿಗೆ ಗೌರವಪೂರ್ವಕವಾಗಿ ನೀಡಲು ಸಭೆ ಅನುಮೋದಿಸಿತು.

ಸಭೆಗೆ ಬಂದ ಪತ್ರಗಳು

ಪತ್ರಗಳನ್ನು ಮುಂದಿನ ಸ್ಥಾಯಿಸಮಿತಿ ಸಭೆಯಲ್ಲಿ ಅವಲೋಕಿಸಲು ಸಭೆ ನಿರ್ಧರಿಸಿತು.

ರಿಜಿಸ್ಟ್ರಾರ್ ವಂದನೆ ಸಲ್ಲಿಸುವುದರ ಮೂಲಕ ಸಭೆ ಮುಕ್ತಾಯವಾಯಿತು

(ಪ್ರೊ.ಭೀಮಸೇನ.ಆರ್)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

8/11/19
(ಡಾ.ಶೈಲಜಾ ಎ.ಸಿ)
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ